ಇಂತಹ ಸಾಮಾನ್ಯ ವ್ಯಕ್ತಿಯೊಂದಿಗೆ ಮಾತನಾಡಬೇಕು. ಸರ್ವಸಾಮಾನ್ಯ ಜಾಣ್ಮೆಯು ತೀವ್ರವಾಗಿರುವುದರ ಇನ್ನೊಂದು ಹೆಸರೇ ಬುದ್ಧಿಮತ್ತೆ. ಸಾಮಾನ್ಯ ವ್ಯಕ್ತಿಯಲ್ಲಿ ಅದರ ಬಹು ಭಾರೀ ಆವಿಷ್ಕಾರ ಕಂಡುಬರುತ್ತದೆ.

ಕೇಜ್ರೀವಾಲರ ಪರಾಭವಕ್ಕೆ ಶೋಕಿಸದಿರಲು ಇನ್ನೂ ಒಂದು ಕಾರಣವಿದೆ. ಆಂದೋಲನ ಹೂಡಿ ಮುಂದಾಗುವ ನೇತೃತ್ವವು ಬಹುಕಾಲ ರಾಜಕೀಯ ವೇದಿಕೆಯಲ್ಲಿ ನಿಲ್ಲದು. ಆಂದೋಲನ ಮಾಡುವ ವಿಚಾರ ಬೇರೆ, ರಾಜಕೀಯ ಮಾಡುವ ವಿಚಾರ ಬೇರೆ, ಅದರಲ್ಲೂ ಅಧಿಕಾರ ಜಮಾಯಿಸುವುದು ಇನ್ನೂ ಕಠಿಣವೇ.
ಅಧಿಕಾರ ಜಮಾಯಿಸುವ ಅನುಭವ ಬೇಕಾಗುತ್ತದೆ. ಅದಕ್ಕೆ ಒಂದಷ್ಟು ಪ್ರಶಿಕ್ಷಣ ಬೇಕು. ಇದಕ್ಕೆ ಮುಂಚೆ ಗುಜರಾತ್ ಆಂದೋಲನ 1974ರಲ್ಲಿ ನಡೆಯಿತು. ಆ ಆಂದೋಲನದಲ್ಲಿ ಮಂಕಡ್ ಎಂಬ ವಿದ್ಯಾರ್ಥಿ ಮುಂದೆ ಬಂದ. ಇಂದು ಆತ ಎಲ್ಲಿದ್ದಾನೆಂದು ದುರ್ಬೀನಿನಿಂದ ಶೋಧನೆ ಮಾಡಬೇಕಾದೀತು. ಅಸ್ಸಾಮನ್ನು ತಲ್ಲಣಗೊಳಿಸುವ ಆಂದೋಲನಗಳು ಹೀಗೆಯೇ ನಡೆದವು. ಪ್ರಫುಲ್ಲ ಮೊಹಂತಾ ಮುಂದೆ ಮುಖ್ಯಮಂತ್ರಿಯಾದನು. ಇಂದು ಆತ ಎಲ್ಲಿದ್ದಾನೆಂದೂ ದುರ್ಬೀನು ಹಿಡಿದು ಶೋಧನೆ ಮಾಡಬೇಕಾದೀತು. ಕೇಜ್ರೀವಾಲನೂ ಅದೇ ಮಾರ್ಗದಲ್ಲಿ ಹೋಗುವವನೆಂಬ ಭವಿಷ್ಯವಾಣಿ ನುಡಿಯುವ ಅಂತಹ ಅವಶ್ಯಕತೆಯಿರಲಿಲ್ಲ. ಆಪ್ ಪಕ್ಷದ 24 ಉಮೇದ್ವಾರರ ವಿರುದ್ಧ ಅರ್ಜಿ ದಾಖಲಾಗಿದ್ದು ಇದರಲ್ಲಿ ಅನೇಕರ ವಿಧಾನಸಭಾ ಸದಸ್ಯತ್ವ ರದ್ದಾಗುವ ಶಕ್ಯತೆಯಿದೆ. ಪುನಃ ಚುನಾವಣೆ ನಡೆದೀತು, ಈಗ ಆಗಿರುವುದರ ಪುನರಾವೃತ್ತಿಯಾದೀತು.

ಆಪ್ ಪಕ್ಷದ ಉದಯವಾದಾಗ ದೇಶದ ಅನೇಕರಿಗೆ ಅನಿಸಿತು, 'ಸಿವಿಲ್ ಸೊಸೈಟಿ' ಜಾಗೃತಗೊಳ್ಳುತ್ತಿದೆ. ಎಂದರೆ ಸುಸಂಸ್ಕೃತ ಸಮಾಜ ಜಾಗ್ರತಗೊಳ್ಳುತ್ತಿದೆ ಹಾಗೂ ಸಾಮಾನ್ಯ ವ್ಯಕ್ತಿಯ ಆಶೆ-ಆಕಾಂಕ್ಷೆಗಳನ್ನು ಪ್ರತಿನಿಧಿಸುತ್ತಿರುವ ಪಕ್ಷ ಉದಯಿಸುತ್ತಿದೆ. ರಾಜಕೀಯ ಸಂಸ್ಕೃತಿಯಲ್ಲಿ ಪರಿವರ್ತನೆಯಾಗುತ್ತಿದೆ. ನಮ್ಮ ಪ್ರಜಾತಂತ್ರ ಅಧಿಕ ಪ್ರೌಢವಾಗುತ್ತ ಹೋಗುತ್ತಿದೆ. ಒಳ್ಳೊಳ್ಳೆಯ ಮಂದಿ ಈ ಸಿವಿಲ್ ಸೊಸೈಟಿಯ ಮೋಹಜಾಲದಲ್ಲಿ ಸಿಲುಕಿದರು. ಭಾರತೀಯ ರಾಜಕಾರಣದಲ್ಲಿ ಹೀಗೇನೂ ಆಗುತ್ತಿರಲಿಲ್ಲ, ಕಾರಣ ಮೂಲದಲ್ಲಿ ಈ ಸಿವಿಲ್ ಸೊಸೈಟಿಯ ಪರಿಕಲ್ಪನೆಯೇ ವಿದೇಶಿಯಾಗಿದೆ. ಹಲವರು ಸಿವಿಲ್ ಎನಿಸಿದರೆ ಉಳಿದವರನ್ನು ಅನ್‌ಸಿವಿಲೈಸ್ಡ್ ಎನ್ನಬೇಕೇ ? ರಾಜಕಾರಣದ ಭಾರತೀಯಕರಣ ಅಥವಾ ಹಿಂದುತ್ವೀಕರಣವಾಗುವ ಕಾಲಖಂಡವಿದು. ಸಮಸ್ತ ಜನರಿಗೂ ನ್ಯಾಯದಿಂದ ನಡೆಯುವ ರಾಜ್ಯ ಬೇಕಾಗಿದೆ. ಯಾವ ಭೇದಭಾವವನ್ನೂ ಮಾಡದ ರಾಜಕಾರಣ ಬೇಕಾಗಿದೆ, ಜನತೆಯ ಸೇವೆ ಮಾಡುವ ನೌಕರಶಾಹಿ ಬೇಕಾಗಿದೆ, ಜನತೆಯ ಮಿತ್ರರೆನಿಸುವ ಪೊಲೀಸ್ ಪಡೆ ಬೇಕಾಗಿದೆ, ಸರ್ಕಾರಿ ಅಧಿಕಾರಿಗಳು ಲೂಟಿಗಾರರೆನಿಸದೆ ಸೇವಕರೆಂದು ಅನಿಸಬೇಕು, ಇದು ಸರ್ವಸಾಮಾನ್ಯ ಜನರ ಭಾವನೆಯಾಗಿದೆ. ಕೇಜ್ರೀವಾಲರು ನರಿಯ ಧೂರ್ತತೆ ಹಾಗೂ ತೋಳದ ದೌರ್ಜನ್ಯ ಜಾರಿಗೆ ತಂದು ರಾಜಕಾರಣಕ್ಕೆ ಧುಮುಕಿದರು. ಜನರಿಗೆ ಅನಿಸಿತು ಮಗ ತರುಣ ಇದ್ದಾನೆ ಏನಾದರೂ ಮಾಡುವನು, ಆದರೆ ಮಗ ಅಪ್ಪನ ತಲೆ ಬೋಳಿಸತೊಡಗಿದ. ಜನ ಶಿಕ್ಷೆ ನೀಡಿದರು.

ದಿಲ್ಲಿ ಮಹಾನಗರಪಾಲಿಕೆ ಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ 30 ಸ್ಥಾನಗಳು ದೊರಕಿದ್ದು, ಅದರ ಮತದಾನದ ಶೇಕಡಾವಾರು ಸಹ ಹೆಚ್ಚಾಗಿದೆ. ಕಾಂಗ್ರೆಸ್ಸಿನ ದಿಲ್ಲಿ ಅಧ್ಯಕ್ಷ ಅಜಯ್ ಮಾಕನ್ ತಮ್ಮ ಸ್ಥಾನಕ್ಕೆ ರಾಜಿನಾಮೆ ನೀಡಿ ಪರಾಭವದ ಹೊಣೆ ಹೊತ್ತರು. ಕಾಂಗ್ರೆಸ್ಸಿನ ಪ್ರಮುಖರಿಂದ ಇದೇ ಅಪೇಕ್ಷೆಯಾಗಿತ್ತು. ಕಾಂಗ್ರೆಸ್ ಪ್ರೌಢ ಪಕ್ಷವಾಗಿದೆ. ಇಂದು ಮತದಾರ ಕಾಂಗ್ರೆಸ್ಸಿನ ಮೇಲೆ ಸಿಟ್ಟಾಗಿದ್ದಾನೆ. ಆದರೆ ಈ ಪ್ರೌಢ ಪಕ್ಷವು ತನ್ನನ್ನು ಸುಧಾರಣೆ ಮಾಡಿಕೊಳ್ಳಬೇಕೆಂದು ನಿಶ್ಚಯಿಸಿದರೆ, ವಂಶವಾದದಿಂದ ಮುಕ್ತಗೊಳ್ಳಲು ನಿಶ್ಚಯಿಸಿದರೆ ಹಾಗೂ ದೇಶದ ಹಿಂದೂ ಮತದಾರರ ಮನಸ್ಸಿನ ಬಗ್ಗೆ ಯೋಚಿಸಲು ನಿಶ್ಚಯಿಸಿದರೆ, ಈ ಪಕ್ಷ ಪುನಃ ಎದ್ದು ನಿಂತೀತು. ಜನ ಸುಖಾಸುಮ್ಮನೆ ಕಾಂಗ್ರೆಸ್ಸನ್ನು ಬಿಡಲು ಸಿದ್ಧರಿಲ್ಲ, ಎಂಬುದನ್ನು ದಿಲ್ಲಿಯ ಚುನಾವಣೆ ತೋರಿಸಿ ಕೊಟ್ಟಿದೆ.

ಯಶಸ್ಸಿನ ಗಾಳಿ ಕೇಜ್ರೀವಾಲರ ತಲೆಗೆ ತೂರಿದಂತೆ ಬಿಜೆಪಿಯ ತಲೆಗೂ ತೂರದಿರಲಿ ಎಂದು ನಾವು ಆಶಿಸೋಣ. ಈಗ ಸಮಸ್ಯೆ ರಸ್ತೆಯ ಹೊಂಡಗಳದ್ದು, ನಿಯಮಿತ ನೀರು ಪೂರೈಕೆಯದ್ದು, ನಿಯಮಿತ ವಿದ್ಯುತ್ ಪೂರೈಕೆಯದ್ದು, ದಕ್ಷತೆಯ ಸಾರ್ವಜನಿಕ ಸಾರಿಗೆಯದ್ದು, ಶಾಲೆಗಳ, ಮಾತಾಭಗಿನಿಯರ ಸುರಕ್ಷಿತತೆಯದ್ದು.
ಈ ಕಾರ್ಯವನ್ನು ಮೋದಿ ಮಾತ್ರ ಮಾಡುವುದಲ್ಲ ಮೋದಿ ಹೆಸರಲ್ಲಿ ಚುನಾಯಿತರಾದ ನಗರಸೇವಕರು -ಭ್ರಷ್ಟಾಚಾರ ಮಾಡದೆ, ಅನಾಚಾರ ಮಾಡದೆ, ಅಬ್ಬರವಿಲ್ಲದೆ ಪ್ರಾಮಾಣಿಕತೆಯಿಂದ- ಮಾಡಬೇಕಿದೆ.

